ಹಾಗೆ ನೋಡಿದರೆ ಈ ಭೂಮಿಯ ಅತಿ ದೊಡ್ಡ ಕಸ ಎಂದರೆ ಮನುಷ್ಯನೇ. ಇಲ್ಲಿ ಮನುಷ್ಯನಿರುವವರೆಗೆ ಕಸವಿದ್ದೇ ಇರುವುದು, ಕಸವಿದ್ದಷ್ಟು ಸಮಯ ಕಸಬರಿಗೆ ಇದ್ದೇ ಇರುವುದು. ಮನುಷ್ಯನೆಂಬ ಕಸವನ್ನು ಗುಡಿಸಿ ತೆಗೆಯಲು ಪ್ರಕೃತಿ ಆಗಾಗ ಸೋಂಕು ಮಾರಿಯರನ್ನು ಕಸಬರಿಗೆಯಂತೆ ಉಪಯೋಗಿಸಿದರೂ ಇನ್ನೂ ಪೂರ್ತಿಯಾಗಿ ಈ ಕಸವನ್ನು ನಿವಾರಿಸಿಕೊಳ್ಳಲು ಅದಕ್ಕೂ ಸಾಧ್ಯವಾಗಿಲ್ಲ. ಮನುಷ್ಯನ ದೊಡ್ಡಸ್ತಿಕೆಯೇ ಅದು. ಭ್ರಷ್ಟಾಚಾರವನ್ನು ಗುಡಿಸಿ ತೆಗೆಯುವುದು ಕಸ ತೆಗೆದಷ್ಟು ಸುಲಭದ ಕೆಲಸವಲ್ಲವಾದರೂ, ಕಸಬರಿಗೆ ಚಿಹ್ನೆಯ ರಾಜಕೀಯ ಪಕ್ಷವೊಂದು ಉಳಿದ ಪಕ್ಷಗಳನ್ನು ಝಾಡಿಸಿ ಎಸೆದಿರುವುದು ರಾಜಕಾರಣದ ಒಂದು ವಿಸ್ಮಯವೇ. (ಹಿಂದಿಯಲ್ಲಿ ಕಸಬರಿಗೆಯನ್ನು 'ಝಾಡ್' ಅಂತ ಈ ಅರ್ಥದಲ್ಲೇ ಕರೆದಿರಬಹುದೇ?) ಕರುನಾಡಿನಲ್ಲಿ ಈ ಕಸಬರಿಗೆ ಪಕ್ಷದ ಚುನಾವಣಾ ಭಾಷಣವನ್ನು ಈ ರೀತಿ ಮಾಡಬಹುದು. 'ಮಹಾಜನಗಳೇ ಮನೆಗೆ ಬಾಗ್ಲು ಎಷ್ಟು ಮುಖ್ಯವೋ, ದೇಹಕ್ಕೆ ತೊಗ್ಲು ಎಷ್ಟು ಮುಖ್ಯವೋ, ದೇಶ ರಕ್ಷಣೆಗೆ ಹಿಡುಗ್ಲೂ ಅಷ್ಟೇ ಮುಖ್ಯ...'

ಗಲ್ಲದ ಮೇಲೆ ಕೈಯಿಟ್ಟು ಕಣ್ಣು ಮಿಟುಕಿಸದೆ ಹ್ಯಾರಿ ಪಾಟರ್ ನೋಡುವ ಹಾಲುಗಲ್ಲದ ಹಸುಳೆಗಳು ಈ ಬ್ರೂಮ್ ಅನ್ನು ಬೇರೆಯೇ ದೃಷ್ಟಿಯಲ್ಲಿ ನೋಡುತ್ತವೆ. ಅವಕ್ಕೆ ಇದು ಆಕಾಶದಲ್ಲಿ ಸಂಚರಿಸಲು ಇರುವ ಒಂದು ಸಾಧನ. ನಮ್ಮ ಕಾರು ಬೈಕುಗಳಿಗೆ ಮಾಡೆಲ್ಲುಗಳಿರುವಂತೆ ಹ್ಯಾರಿಯ ಬ್ರೂಮಿನ ಹೆಸರು 'ನಂಬಸ್ ಟೂ ಥೌಸಂಡ್'! ಇದು ಅತ್ಯಂತ ಮುಂದುವರಿದ ಸುಸಜ್ಜಿತ ಮಾಡೆಲ್ ಅಂತೆ!... ಲೋಕಲ್ ಹುಲ್ಲಿನ ಹೂವಿನಿಂದ ಮಂಕಿ ಬ್ರ್ಯಾಂಡ್ ಹಿಡಿಯನ್ನು ತಯಾರಿಸಿ ಯಶಸ್ವಿಯಾದ ಆತ್ಮನಿರ್ಭರರ ಕಥೆಯನ್ನು ಕೇಳಿದ್ದೇವೆ. ಇದನ್ನು ಕೇಳಿದ ಮೇಲೆ ಕೈ ಹಿಡಿದವರ ಕೈ ಬಿಡದು ಈ ಹಿಡಿ ಎಂದು ಧಾರಾಳವಾಗಿ ಹೇಳಬಹುದು.

ಹೆಂಗಸರ ಆಳ್ವಿಕೆ ಇರುವ ಮನೆಗಳಲ್ಲಿ ಈ ಪೊರಕೆಗೆ ವಿಶೇಷ ಸ್ಥಾನಮಾನಗಳು ಇದ್ದೇ ಇರುತ್ತವೆ. ಗೊರಕೆ ಹೊಡೆಯುವ ಪತಿಯ ವಿರುದ್ಧ ಪೊರಕೆ ಎತ್ತಿದ ಹೆಂಡತಿಯರ ಸಾಹಸಗಾಥೆಗಳ ಕಾರ್ಟೂನಿನ ಜೊತೆಗೆ, ಮನೆಯನ್ನೆಲ್ಲ ಗುಡಿಸಿ ಗುಂಡಾಂತರ ಮಾಡುವ ಮಹಿಳೆಯರ ಸಾಹಸ ಕಥೆಗಳ ಮೆಗಾ ಸೀರಿಯಲ್‌ಗಳನ್ನು ಸೋಮವಾರದಿಂದ ಶುಕ್ರವಾರದವರೆಗೆ ನೋಡಿಯೇ ಇರುತ್ತೇವೆ. 'ಎಷ್ಟು ಚಂದ ಗುಡಿಸಿದ್ದೀಯ ಮಗಳೇ ಒಂದೇ ಒಂದು ಕಸ ಹುಡುಕಿದರೂ ಇಲ್ಲ' ಎಂದು ಕಸಗುಡಿಸುವ ಹೆಣ್ಣು ಮಕ್ಕಳ ಮೇಲೆ ವಿಶೇಷ ಅಕ್ಕರೆ ತೋರಿ, 'ನೀನೂ ಇದ್ದೀಯ ಪೆದ್ದು, ಒಂದು ದಿನವಾದರೂ ಕಸಗುಡಿಸಿದೀಯ?' ಎಂದು ಗುಡಿಸದ ಹೆಣ್ಣುಮಕ್ಕಳನ್ನು ಗದರುವುದು ಮನೆ ತುಂಬಾ ಮಕ್ಕಳಿದ್ದ ಕಾಲದಲ್ಲಿ ಕಾಮನ್ ಆಗಿತ್ತು. ಮನೆ, ಅಂಗಳ, ಹಟ್ಟಿ ಎಂದು ಈ ಗುಡಿಸುವ ಕಾಯಕವನ್ನು ಆಗ ಮನೆಯ ಮಕ್ಕಳು ಪಾಲುಮಾಡಿಕೊಳ್ಳುತ್ತಿದ್ದರು. ಬೆಳೆ ಕೊಯ್ಲಾಗಿ ಕಣಕ್ಕೆ ಬರುವಾಗ ಕಣ ಸಗಣಿ ಗುಡಿಸಿ ತಯಾರಾಗಿ ಇರಬೇಕಿತ್ತು. ಅದೂ ಒಂದು ಸಲ ಅಲ್ಲ, ಮೇಲೆ ಮೇಲೆ ಮೂರು ನಾಲ್ಕು ಬಾರಿ, ವಿರಾಟ್ ಬ್ಯಾಟ್ ಹಿಡಿದು ಸ್ವೀಪ್ ಮಾಡುವಂತೆ, ಮೋಟು ಕಡ್ಡಿಪೊರಕೆಯನ್ನು ಎರಡು ಕೈಯಲ್ಲಿ ಹಿಡಿದು ಸ್ವೀಪಿಸಬೇಕಿತ್ತು. ಕಣ ಗುಡಿಸಿ ಸೊಂಟ ನೇರವಾಗಿಸುವಾಗ ಲಟಲಟನೆ ಎಲುಬು ಮುರಿದ ಶಬ್ದವಾಗುತ್ತಿತ್ತು. ಕುಳಿತು ಉಣ್ಣಬೇಕಾದರೆ ಸೊಂಟ ಸಣ್ಣವಾಗಬೇಕು ಎನ್ನುತ್ತಿದ್ದ ಕಾಲ ಮಾತ್ರವಲ್ಲ, ಗುಡಿಸಿ ಮೋಟಾದ ಕಸಬರಿಗೆಯನ್ನೂ ಎಸೆಯದೆ ಉಳಿಸಿಕೊಳ್ಳುತ್ತಿದ್ದ ಕಾಲ ಅದು. ಮೊಬೈಲಿಗೆ ಕ್ಲೀನ್ ಮಾಸ್ಟರ್ ಸಿಕ್ಕಿಸಿಕೊಂಡು ವ್ಯವಹರಿಸುವ ಇಂದಿನ ಆ್ಯಪ್ ಜನರೇಶನ್‌ಗೆ ಅಂದಿನ ಸ್ವೀಪ್ ವಿಷಯಗಳೆಲ್ಲ ಅರ್ಥ ಆಗಬಹುದೇ?

'ಶಿಶುವಾಗು, ಹಸುವಾಗು, ಸಸಿಯಾಗು, ಕಸಬೊರಕೆಯಾಗಿಳೆಗೆ' ಎಂದು ಡಿವಿಜಿಯವರು 'ಕಸಬೊರಕೆ' ಎಂಬುದನು ತಮ್ಮ ಬೊಚ್ಚು ಬಾಯಿಯಿಂದ ಹೇಳಿ ಕಗ್ಗದ ಜೊತೆಗೆ ತುಂಬುಗನ್ನಡದ